ಚುಕ್ಕೆ ಗುರುತಿಲ್ಲದ ಪ್ರಶ್ನೆ 37 : 52

ಸದಸ್ಯರ ಹೆಸರು : ಶ್ರೀ ರೋಷನ್ ಬೇಗ್ ಆರ್.

ಉತ್ತರಿಸುವ ಸಚಿವರು : ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ. ಆ.	ಬೆಂಗಳೂರು ಮೆಟ್ರೋಪಾಲಿಟಿನ್ ಕೌನ್ಸಿಲ್ ರಚಿಸುವ ವಿಷಯ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವಾಗ ರಚಿಸ ಲಾಗುವುದು;	ಸದ್ಯಕ್ಕೆ ಇಲ್ಲ. ಸದ್ಯಕ್ಕೆ ಇಲ್ಲ. ಆದರೆ ಡಾ|| ಕಸ್ತೂರಿರಂಗನ್ ರವರ ಎಲ್ಲಾ ಶಿಫಾರಸ್ಸಿನ ಸಾರಾಂಶಗಳನ್ನು ಬೆಂಗಳೂರು ಮೆಟ್ರೊಪಾಲಿಟನ್ ಕೌನ್ಸಿಲ್ ರಚಿಸುವ ಶಿಫಾರಸ್ಸನ್ನು ಒಳಗೊಂಡಂತೆ ಸರ್ಕಾರ ಪರಿಶೀಲಿಸುತ್ತಿದೆ. ಪರಿಶೀಲಿಸಿ ನಂತರ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು.
ಇ.	ಬೆಂಗಳೂರು ನಗರದಲ್ಲಿ ಸೊಳ್ಳೆಗಳ ಹಾವಳಿ ಮತ್ತು ಅದರಿಂದ ಹರಡುತ್ತಿರುವ ರೋಗದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೋಗದಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಯಾವ ಪರಿಣಾಮ ಬೀರಿದೆ.	ಬಂದಿದೆ. ಈ ರೋಗದಿಂದ ಹಠಾತ್ತನೆ ಅಧಿಕ ಜ್ವರ, ತೀವ್ರ ತಲೆನೋವು, ಮೈನೋವು, ಕೀಲುಗಳಲ್ಲಿ ನೋವು, ವಾಕರಿಕೆ ಮತ್ತು ವಾಂತಿ ಕಾಣಿಸಿಕೊಳ್ಳುತ್ತದೆ.
ಈ.	ಹಾಗಿದ್ದಲ್ಲಿ ಸರ್ಕಾರ ಸೊಳ್ಳೆಗಳ ನಿಯಂತ್ರಣಕ್ಕೆ ಯಾವ ಕ್ರಮ ಕೈಗೊಂಡಿದೆ?	<u>ಸೊಳ್ಳೆಗಳ ನಿಯಂತ್ರಣಕ್ಕೆ ಬೆಂಗಳೂರು ಮಹಾನಗರಪಾಲಿಕೆ ತೆಗೆದುಕೊಂಡಿರುವ ಕ್ರಮಗಳು</u> ಸೊಳ್ಳೆಗಳ ಹಾವಳಿಯ ವ್ಯಾಪಕ ನಿಯಂತ್ರಣಕ್ಕಾಗಿ ಪಾಲಿಕೆ ವ್ಯಾಪ್ತಿಯಲ್ಲಿ "Rapid Response Team" ರಚಿಸಲಾಗಿರುತ್ತದೆ. ಸದರಿ ತಂಡವು ತಮ್ಮ ವಲಯ ವ್ಯಾಪ್ತಿಗಳಲ್ಲಿ ಸೊಳ್ಳೆ ಮೂಲ ನಿರ್ಮೂಲನ ಕಾರ್ಯಕ್ರಮ, (Source Reduction) ಅಲ್ಲಿನ ಪರಿಸ್ಥಿತಿಗನುಗುಣವಾಗಿ ಸೊಳ್ಳೆ ಸಂತತಿ ನಾಶಪಡಿಸಲು ಮೂಲನಾಶಕ ರಾಸಾಯನಿಕಗಳನ್ನು ಅಗತ್ಯಕ್ಕೆ ಅನುಗುಣವಾಗಿ ಆದ್ಯತೆ ಮೇರೆಗೆ ಎಂ.ಸಿ.

		ಗ್ಯಾಂಗ್‌ಮನ್‌ಗಳನ್ನು ಉಪಯೋಗಿಸಿಕೊಂಡು ಸಿಂಪಡಣೆ ಕಾರ್ಯ ಮಾಡಲಾಗುತ್ತಿದೆ. ಪ್ರಕರಣಗಳ ಸಾಂದ್ರತೆಗೆ ಅನುಗುಣವಾಗಿ ಧೂಮೀಕರಣ ಹಾಗೂ ಸೊಳ್ಳೆ ಉತ್ಪತ್ತಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. **ಆರೋಗ್ಯ ಶಿಕ್ಷಣ :** ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ಅಭಿಯಾನದಡಿಯಲ್ಲಿ ಸ್ವಯಂ ಸೇವಾ ಸಂಸ್ಥೆಗಳನ್ನು ಉಪಯೋಗಿಸಿಕೊಂಡು ಮನೆ ಮನೆಗೆ ಕರಪತ್ರಗಳನ್ನು ಹಂಚುವ ಮೂಲಕ ಸಾರ್ವಜನಿಕರಲ್ಲಿ ರೋಗ ನಿಯಂತ್ರಿಸಲು ಅರಿವು ಮೂಡಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ರೇಡಿಯೋ ಮತ್ತು ದೂರದರ್ಶನಗಳ ಮೂಲಕವೂ ಸಾರ್ವಜನಿಕರೊಂದಿಗೆ ನೇರಪ್ರಸಾರ ಕಾರ್ಯಕ್ರಮ ಏರ್ಪಡಿಸಿ ಸಾರ್ವಜನಿಕರಿಗೆ ಅಗತ್ಯ ಮುಂಜಾಗ್ರತಾ ಕ್ರಮಗಳ ಬಗ್ಗೆ ಅರಿವು ಮೂಡಿಸಲಾಗಿದೆ. ಜಾಥಾ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ. ● ರೋಗ ಉಲ್ಬಣಗೊಂಡಿರುವ ಪ್ರದೇಶಗಳಲ್ಲಿ ಹೋಮಿಯೋಪತಿ ಚಿಕಿತ್ಸಾ ಶಿಬಿರಗಳನ್ನು ಹೋಮಿಯೋಪತಿ ಕಾಲೇಜುಗಳ ಸಹಯೋಗ ದೊಂದಿಗೆ ತೆರೆಯಲಾಗಿದ್ದು, ಸೂಕ್ತ ಚಿಕಿತ್ಸೆ ನೀಡಲಾಗುತ್ತಿರುತ್ತದೆ. ● ಶಂಕಿತ ಚಿಕುನ್‌ಗುನ್ಯ ರೋಗದ ಚಿಕಿತ್ಸೆಗಾಗಿ ಪಾಲಿಕೆಯ ಎಲ್ಲಾ ಆಸ್ಪತ್ರೆಗಳಲ್ಲಿ ಸಹಾಯ ಕೇಂದ್ರ ತೆರೆಯಲಾಗಿದೆ, ಉಚಿತವಾಗಿ ವೈದ್ಯೋಪಚಾರ ನೀಡಲಾಗುತ್ತಿದೆ. ಚಿಕಿತ್ಸೆ ಸಮಯದಲ್ಲಿ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ. ಪಾಲಿಕೆಯ ಎಲ್ಲಾ ಆಸ್ಪತ್ರೆಗಳಲ್ಲಿ ಅಗತ್ಯ ಔಷಧಿಗಳನ್ನು ದಾಸ್ತಾನಿಡಲಾಗಿದೆ. ● ಅನುಮಾನಾಸ್ಪದ ರೋಗಿಗಳ ರಕ್ತದ ಮಾದರಿಗಳನ್ನು ಸಂಗ್ರಹಿಸಿ ರಾಷ್ಟ್ರೀಯ ವೈರಾಣು ಸಂಸ್ಥೆಗೆ ಕಳುಹಿಸಲಾಗುತ್ತಿದೆ.

		● ಕೀಟ ಸಂಗ್ರಹಕಾರರ ಕಾರ್ಯವನ್ನು ಪರಿಶೀಲಿಸಿ ಎಲ್ಲೆಲ್ಲಿ ನೀರು ನಿಂತಿರುವುದೋ ಅಲ್ಲಿ ಸೊಳ್ಳೆ ಉತ್ಪತ್ತಿಯಾಗದಂತೆ ಸೊಳ್ಳೆ ಔಷಧಿಯನ್ನು ಸಿಂಪಡಿಸಲಾಗುತ್ತಿದೆ. ಹಾಗೂ ದೊಡ್ಡ ಮೋರಿಗಳಲ್ಲಿ ಎ.ಎಲ್.ಓ. ಕಾರ್ಮಿಕರನ್ನು ಉಪಯೋಗಿಸಿಕೊಂಡು ನೀರು ನಿಲ್ಲದಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ● ಮನೆಗಳ ಸುತ್ತಮುತ್ತ ಬಿಸಾಡಿದ ತ್ಯಾಜ್ಯವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸಾರ್ವಜನಿಕರಿಗೆ ತಿಳಿಸುವುದು ಹಾಗೂ ಸಂಗ್ರಹವಾಗಿದ್ದಲ್ಲಿ ಅಂತಹ ವಸ್ತುಗಳನ್ನು ನಾಶಪಡಿಸಲು ಅಥವಾ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ● ಟೈರಿನ ಮಾರಾಟಗಾರರು ಮತ್ತು ಹಳೆ ಟೈರಿನ ದಾಸ್ತಾನುಗಾರರು, ಸಿಮೆಂಟ್ ಟ್ಯಾಂಕ್ ತಯಾರಿಸುವವರು, ಟಾರು ಡ್ರಮ್ಮುಗಳ ಶೇಖರಣೆ, ಇತರ ಖಾಲಿ ಡ್ರಮ್ಮುಗಳನ್ನು ದಾಸ್ತಾನಿಡುವವರಿಗೆ ಇತಂಹ ವಸ್ತುಗಳಲ್ಲಿ ನೀರು ಶೇಖರಣೆಯಾಗದಂತೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿದೆ. ● ಸಿನಿಮಾ ಮಂದಿರಗಳಲ್ಲಿ ಇರಿಸಿರುವ ಬೆಂಕಿ ಆರಿಸುವ ಬಕೆಟ್ಟುಗಳಲ್ಲಿ ನೀರನ್ನು ವಾರಕ್ಕೊಮ್ಮೆ ತಪ್ಪದೇ ಖಾಲಿ ಮಾಡಿ ಮತ್ತೆ ಭರ್ತಿಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ● ಮಹಾನಗರ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಎಳನೀರು ಚಿಪ್ಪುಗಳು ಸಂಗ್ರಹಣೆ ಯಾಗುತ್ತಿವೆಯೋ ಅವುಗಳನ್ನು ಕೂಡಲೇ ತೆಗೆಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸೊಳ್ಳೆಗಳ ಹಾವಳಿ ನಿಯಂತ್ರಣದಲ್ಲಿ ಪ್ರತಿ ವಾರ್ಡಿಗೆ 1 ರಂತೆ 100 ಫಾಗ್ - ಜನರೇಟಿಂಗ್ ಯಂತ್ರಗಳನ್ನು ಖರೀದಿಸಿ ನಿಗಧಿತ ಕಾರ್ಯಕ್ರಮದಂತೆ ಧೂಮೀಕರಣ

		ಕಾರ್ಯವನ್ನು ನಿರ್ವಹಿಸಲಾಗುತ್ತಿದೆ. ಈ ಕಾರ್ಯಕ್ರಮದಿಂದಾಗಿ ಕೀಟಗಳಿಂದ ಹರಡುವ ಡೆಂಗ್ಯೂ ಮತ್ತು ಚಿಕೂನ್‌ಗುನ್ಯಾ ರೋಗಗಳ ಹರಡುವಿಕೆಯನ್ನು ನಿಯಂತ್ರಿಸಲಾಗಿದೆ. **<u>ಸೊಳ್ಳೆಗಳ ನಾಶಕ್ಕಾಗಿ ಔಷಧಿ ಸಿಂಪಡಿಸಲು ಬೆಂಗಳೂರು ಮಹಾನಗರ ಪಾಲಿಕೆ ಕೈಗೊಂಡಿರುವ ಕ್ರಮಗಳು</u>** ● ಎಲ್ಲಾ ಆರೋಗ್ಯ ವಾರ್ಡ್‌ಗಳಲ್ಲಿ ನೀರು ನಿಂತಿರುವ ಪ್ರದೇಶಗಳಲ್ಲಿ ಸೊಳ್ಳೆಯ ಲಾರ್ವಾನಾಶಕವಾದ ಲಾರ್ವಿಸೈಡ್ಸ್‌ಗಳನ್ನು ವೆಹಿಕಲ್ ಮೌಂಟೆಡ್ ಸ್ಪ್ರೇಯರ್‌ಗಳ ಮುಖಾಂತರ ಪ್ರತಿದಿವಸವೂ ನಿಗದಿ ಪಡಿಸಿರುವ ಕಾರ್ಯಕ್ರಮದಂತೆ ಲಾರ್ವಾನಾಶಕಗಳನ್ನು ಸಿಂಪಡಿಸಲಾಗುತ್ತಿದೆ. ಹಾಗೂ ಕೈಪಂಪುಗಳ ಮೂಲಕ ನಿಗದಿತ ಕಾರ್ಯಕ್ರಮದಂತೆ ಕೀಟನಾಶಕ ಸಿಂಪಡಿಸಲಾಗುತ್ತಿದೆ. ● ಮುಂದುವರೆದಂತೆ ಸೊಳ್ಳೆಗಳ ನಾಶಕ್ಕಾಗಿ ನಗರ ಮಲೇರಿಯಾ ಯೋಜನೆಯಡಿಯಲ್ಲಿ ಸೊಳ್ಳೆ ಲಾರ್ವನಾಶಕವಾದ ಟಿಮಿಫಾಸ್, ಪೆಂತಿಯಾನ್ ಗಳನ್ನು ಸಾಕಾಗುವಷ್ಟು ದಾಸ್ತಾನು ನೀಡಲಾಗಿದೆ.